ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೆ, ಯಾವ ಆಧಾರದ ಮೇಲೆ ತಾವು ಮಾತನಾಡುತ್ತೀರಿ ಎಂಬ ಬಗ್ಗೆ ನಮಗೆ ತಿಳಿಸಿಲ್ಲ. 5ನೇ ತಾರೀಖು ಮಾತುಕತೆ ಮಾಡಲು ನಿಗದಿ ಮಾಡಿಕೊಂಡಿದ್ದೀರಿ. ಆ ರೀತಿ ದಿನಾಂಕವನ್ನು ನಿಗದಿ ಮಾಡಿಕೊಂಡಿದ್ದಾಗಲೂ 25-6-1991ರ ಟ್ರಿಬ್ಯುನಲ್ ಆದೇಶದ ಚೌಕಟ್ಟಿನಲ್ಲಿ ಮಾತನಾಡುತ್ತೀರೋ ರಾಷ್ಟ್ರೀಯ ಜಲನೀತಿಯೆಂದೇನು ಹೊಸದಾಗಿ ಪಾಲಿಸಿ ಇದೆ ಅದರ ಅಡಿಯಲ್ಲಿ ಮಾತನಾಡುತ್ತೀರೋ ಎಂಬ ಬಗ್ಗೆ ಸ್ಪಷ್ಟ ಮಾಡಿಲ್ಲ. ಸರ್ಕಾರದ ಸ್ಪಷ್ಟವಾದ ನಿಲುವು ಇಲ್ಲದಿರುವ ನೀತಿಯನ್ನು ಖಂಡಿಸಿ ನಾವೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ)ನ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು:- ಈಗ ಸದನವನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2-15ಕ್ಕೆ ಮುಕ್ತಾಯಗೊಂಡು ಪುನಃ 3 ಗಂಟೆಗೆ ಸೇರಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3.20 ಗಂಟೆಗೆ ಪ್ರಾರಂಭವಾಯಿತು. ಮಾನ್ಯ ಉಪಾಧ್ಯಕ್ಷ (ಶ್ರೀ ಚಂದ್ರಶೇಖರ ಎಂ. ಮಾಮನಿ) ರವರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು:- ಮಾನ್ಯ ಮಂಜುನಾಥ ಕುನೂರ್‌ರವರೇ ತಾವು ಈಗಾಗಲೇ ಮಾತನಾಡಿದ್ದೀರಿ. ಇನ್ನು ಐದು ನಿಮಿಷಗಳಲ್ಲಿ ತಮ್ಮ ಬೇಡಿಕೆಗಳ ಮೇಲಿನ ಭಾಷಣವನ್ನು ಮುಗಿಸಬೇಕು. ಇನ್ನೂ ಬಹಳಷ್ಟು ಸದಸ್ಯರು ಮಾತನಾಡುವವರು ಇದ್ದಾರೆ.

(6) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಆ):- ಹುಬ್ಬಳ್ಳಿಯಲ್ಲಿ ರೈಲ್ವೆ ವಲಯ ಹಾಗು ಹೈಕೋರ್ಟಿನ ನ್ಯಾಯ ಪೀಠದ ರಚನೆ

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಚಾರ, ಉತ್ತರ ಕರ್ನಾಟಕ ಬಂದ್ ಆಗಿದೆ. ಮುಖ್ಯವಾಗಿ ರೈಲ್ವೆ ವಲಯ ಹಾಗೂ ಹೈಕೋರ್ಟ್ ನ್ಯಾಯ ಪೀಠದ ಬಗ್ಗೆ ನಾವು ಒಬ್ಬ ಶಾಸಕರಾಗಿ ಪ್ರಸ್ತಾಪ ಮಾಡದಿದ್ದರೆ. . .

ಉಪಾಧ್ಯಕ್ಷರು:- ಹೀಗೆ ಮಾತನಾಡುವುದು ಸರಿಯಲ್ಲ, ಈಗ ಇದು ಎಲ್ಲಾ ಹಾಗೆ ಉಳಿಯುತ್ತದೆ. ನಾಳೆ ಇದಕ್ಕೆ ರಿಪ್ಲೈ ಕೊಡಬೇಕಾಗಿದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಉಪಾಧ್ಯಕ್ಷರೆ, ಹಿಂದಿನ ಮುಖ್ಯಮಂತ್ರಿಗಳು, ಈಗಿನ ಪ್ರಧಾನಮಂತ್ರಿಯವರು ಆಗಿರುವವರು ಕರ್ನಾಟಕ ರಾಜ್ಯದ ದೃಷ್ಟಿಯಿಂದ ಕೇಂದ್ರವಲಯ ಹುಬ್ಬಳ್ಳಿಯಲ್ಲಿ ಆಗಬೇಕೆಂದು, ಇದು ಇಡೀ ಉತ್ತರ ಕರ್ನಾಟಕ ಜನರ ಬೇಡಿಕೆಯಾಗಿದೆ. ಉತ್ತರ ಕರ್ನಾಟಕದ ಬಗ್ಗೆ ಏನು ನಿಲುವು ತೆಗೆದುಕೊಳ್ಳುತ್ತಿದ್ದೀರಿ ಎಂಬ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಆದುದರಿಂದ ಹುಬ್ಬಳ್ಳಿ ಕೇಂದ್ರ ವಲಯವಾಗಬೇಕೆನ್ನುವುದಕ್ಕೆ ಸರ್ಕಾರ ನಾಳೆಯೇ ಒಂದು ನೋಟ್ ಕಳುಹಿಸಿಕೊಡಬೇಕು.